ಮೇಲೆ ಕೂತ ನೊಣವೂ ಹಾರುತ್ತಿರಲಿಲ್ಲ. ಆ ಪರಿಯ ಮೋಹ. ಆ ಪರಿಯ ಮುದ್ದು. 'ತಾಯಂದಿರು ಹೀಗೂ ಇರುತ್ತಾರಾ?' ಎಂದು ಈಗ ನೆನೆಸಿಕೊಂಡರೆ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಷ್ಟು ಅಚ್ಚರಿ ಹುಟ್ಟಿಸುತ್ತಾಳೆ ಪುಣ್ಯಮ್ಮ. 'ತಾಯಂದಿರು ಇರುವುದೇ ಹೀಗೆ' ಎಂದು ಸಾರ್ವತ್ರಿಕಗೊಳಿಸಲೇ? ಬೆಳೆದು ದೊಡ್ಡವರಾದ ಹುಡುಗರು ಪುಣ್ಯಮ್ಮನ ಮಗನಂತೆ? ಅಮ್ಮ ಅಂದರೆ ಬೇಡದ ಹೊರೆಯಾಗಿಬಿಡುತ್ತಾಳಾ? ಛೇಛೇ, ಎಲ್ಲರನ್ನೂ ಒಂದೇ ಮಾಪಕದಲ್ಲಿ ಅಳೆಯುವುದು ತಪ್ಪು. ಅಥವಾ... ಅಥವಾ... ಪುಣ್ಯಮ್ಮನ ಮಗ ಬದುಕಿದ್ದಾನೆ ಅನ್ನುವುದಕ್ಕೆ ಯಾವ ಖಾತರಿ? ಏನೋ ಕಾಯಿಲೆ ಬಂದೋ, ಅಪಘಾತದಲ್ಲೋ... ನನ್ನ ವಾದ ನನಗೇ ಸಮರ್ಥನೀಯವೆನಿಸುತ್ತಿಲ್ಲ. ಹಾಗೇನಾದರೂ ಆಗಿದ್ದರೆ ಮಗನ ಮೇಲೆ ಜೀವ ಇಟ್ಟುಕೊಂಡಿದ್ದ ಪುಣ್ಯಮ್ಮ ಬದುಕುತ್ತಿರಲಿಲ್ಲ. ಕೈಯಾರೆ ಜೀವ ತೆಗೆದುಕೊಂಡು ಮಗನ ಹಿಂದೆ ನಡೆದು ಬಿಡುತ್ತಿದ್ದಳು. ಒಂದೊಮ್ಮೆ ದುಡಿಯಲಾಗದ ಬೇಜವಾಬ್ದಾರಿಯಿಂದ ಪುಣ್ಯಮ್ಮನ ಮಗನೇ ಅಮ್ಮನನ್ನು ಪುಸಲಾಯಿಸಿ ಬೀದಿಗಿಳಿಸಿದ್ದರೆ? ಛೇಛೇ, ಅಂತವಳಲ್ಲವೇ ಅಲ್ಲ ಪುಣ್ಯಮ್ಮ. ದುಡಿದೇ ಹೊಟ್ಟೆ ತುಂಬಿಸಿಕೊಂಡಿದ್ದ ಜೀವ ಅದು. ಯಾವ ಪರಿಸ್ಥಿತಿಯಲ್ಲಿ ಅವಳು ಸಿಕ್ಕಿಕೊಂಡಿದ್ದಾಳೋ ಯಾರಿಗೆ ಗೊತ್ತು? ಏನೆಂದುಕೊಂಡರೂ ಊಹೆ ಊಹೆಯೇ. ಹಿಂದೊಮ್ಮೆ ಅವಳಿಗೆ ಪರಿಚಯವಿದ್ದ, ನನಗೂ ಪರಿಚಯವಿರುವ ಯಾರೊಂದಿಗಾದರೂ ಈ ವಿಷಯ ಪ್ರಸ್ತಾಪ ಮಾಡಿದರೆ ಒಗಟು ಒಡೆಯಬಹುದಾ? ಅನುಮಾನ. ಪುಣ್ಯಮ್ಮ ಎನ್ನುವ ಯಃಕಶ್ಚಿತ್ ಜೀವಿಯ ಬಗ್ಗೆ ಯಾರಿಗಿರುತ್ತದೆ ಕುತೂಹಲ? ಬಹುಶಃ ಪುಣ್ಯಮ್ಮ ಇನ್ನ್ಯಾವತ್ತೂ ನನ್ನ ಕಣ್ಣಿಗೆ ಬೀಳಲಾರಳು. ಬಿದ್ದರೂ ಅವಳನ್ನು ಕೂರಿಸಿಕೊಂಡು ಕಷ್ಟ, ಸುಖ ವಿಚಾರಿಸುವಷ್ಟು ನಾನು ಔದಾರ್ಯ ತೋರಿಸಲಾರೆ. ನನ್ನದೇ ಸಕಾರಣಗಳು ನನ್ನ ನಾಲಿಗೆ ಬಿಗಿ ಹಿಡಿಯುತ್ತವೆ. ಅಂದಮೇಲೆ ಉತ್ತರ ಸಿಗದ ಪ್ರಶ್ನೆಗಳೊಂದಿಗೆ ಆಗೀಗ ಕುಟುಕುವ ಪಾಪಪ್ರಜ್ಞೆಯನ್ನು ಸಹಿಸಿಕೊಳ್ಳಬೇಕಾದ್ದೂ ಅನಿವಾರ್ಯ. ಪಾಪಪ್ರಜ್ಞೆಯಂತಾ ದೊಡ್ಡ ಪದ ಈ ಸಂಗತಿಗೆ ಹೊಂದಿಕೊಳ್ಳುತ್ತದೆಯಾ? ನನ್ನ ಮಟ್ಟಿಗೆ 'ಹೌದು' ಅನಿಸುವುದು ಹೌದು.

## ವಸುಮತಿ ಉಡುಪ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕಿರಣಕೆರೆ ಸ್ವಗ್ರಾಮ. ಪ್ರಸ್ತುತ ಮೈಸೂರಿನಲ್ಲಿ ವಾಸ. ಕತೆ, ಕಾದಂಬರಿ, ನಾಟಕ, ಶಿಶುಸಾಹಿತ್ಯ, ಪ್ರಬಂಧ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ ಮಾಡಿದ್ದಾರೆ. ಸಮಗ್ರ ಕಥಾ ಸಂಕಲನ ಮೂರು ಭಾಗಗಳಲ್ಲಿ ಪ್ರಕಟವಾಗಿದೆ. ಮಲೆನಾಡಿನ ಪರಿಸರ, ಭಾಷೆ, ಜೀವನಶೈಲಿ ಅವರ ಬಹುತೇಕ ಕತೆಗಳ ವಸ್ತು.